1ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 1480/2022**

ಚಾಸಾ - **16**

**ಪ್ರಾ.ಸಾ. - 9**

**ಸಾಕ್ಷಿದಾರರ ಹೆಸರು** : ಮಹಾಂತೇಶ ವೀರಪ್ಪ ಹೊಸಪೇಟಿ

**ಸಾಕ್ಷಿದಾರರ ವಯಸ್ಸು** : **53** ವರ್ಷ

**ಸಾಕ್ಷಿದಾರರ ಉದ್ಯೋಗ** : ಪಿ ಐ

**ಸಾಕ್ಷಿದಾರರ ವಿಳಾಸ** : ಡಿ ಸಿ ಆರ್ ಇ ಪಿ ಎಸ್ ಬೆಳಗಾವಿ ಪೋಲಿಸ ಠಾಣೆ

---

**ಪ್ರಮಾಣ ವಚನ ಮಾಡಿದ ದಿನಾಂಕ : 28.11.2025.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ**

**21.01.2022** ರಿಂದ **14.12.2023** ವರೆಗೆ ಸಿ ಪಿ ಐ ಕಿತ್ತೂರು ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿ. **10.03.2022** ರಂದು ಈ ಪ್ರಕರಣದ ಕಡತವನ್ನು ಚಾಸಾ **15** ರಿಂದ ಪಡೆದು ಅದೇ ದಿನ ಚಾಸಾ **13** ಹಾಗೂ **14** ರವರು ನೀಡಿದ ವರದಿಗಳನ್ನು ಪಡೆದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಶವಪಂಚನಾಮೆ ಬರೆದ ಬಗ್ಗೆ ಹಾಗೂ ಅಪಘಾತ ಸ್ಥಳದ ಪಂಚನಾಮೆಯನ್ನು ಬರೆದ ಬಗ್ಗೆ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ **21** ಮತ್ತು **22** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ **21**ಎ ಮತ್ತು **22**ಎ ಎಂದು ಗುರುತಿಸಲಾಯಿತು. ದಿ. **31.03.2022** ರಂದು ಚಾಸಾ **11** ರವರು ಪೂರೈಸಿದ ಮೃತನ ಪಿ ಎಮ್ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ **16** ಎಂದು ಗುರುತಿಸಲಾಗಿದೆ. ದಿ. **02.04.2022** ರಂದು ಚಾಸಾ **12** ರವರು ಪೂರೈಸಿದಂತಹ ಯಾಂತ್ರಿಕ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನುನ ಈಗಾಗಲೇ ನಿಪಿ **17** ಎಂದು ಗುರುತಿಸಲಾಗಿದೆ. ದಿ. **05.04.2022** ರಂದು ಪ್ರಕರಣದ ಆರೋಪಿಯನ್ನು ದಸ್ತಗಿರಿ ಮಾಡಿ ಯೋಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಅಪಘಾತಕ್ಕೆ ಸಂಬಂದಿಸಿದ ಆರ್ ಸಿ ಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಆರೋಪಿಯನ್ನು ವಾಹನ ಚಲಾಯಿಸಲು ಚಾಲನಾ ಪ್ರಮಾಣ ಪತ್ರ ಹಾಗೂ ವಾಹನದ ಇನ್ನುಶೂರನ್ಸ ಕೇಳಲಾಗಿ ಇಲ್ಲ ಎಂದು ಹೇಳಿರುತ್ತಾರೆ. ಅದೇ ದಿನ ಪಿ ಎಫ್ ನ್ನು ನ್ಯಾಯಾಲಯಕ್ಕೆ

ಕಳುಹಿಸಲಾಯಿತು. ದಿ. **18.07.2022** ರಂದು ಗಾಯದ ಪ್ರಮಾಣ ಪತ್ರವನ್ನು ಚಾಸಾ **10** ರಿಂದ ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಅದನ್ನು ಈಗಾಗಲೇ ನಿಪಿ **20** ಎಂದು ಗುರುತಿಸಲಾಗಿದೆ. ಆರೋಪಿತರ ವಿರುದ್ದ ಸಾಕ್ಷ್ಯಧಾರಗಳು ಇದ್ದ ಕಾರಣ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುವರು.

ಪಾಟೀ **ಸವಾಲುಃ ಆರೋಪಿ ಪರ ವಕೀಲರಿಂದ**ಃ

ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ, ಆರೋಪಿ ಯಾವುದೇ ತಪ್ಪು ಮಾಡದೇ ಇರುವುದು ಕಂಡು ಬಂದರೂ ಸಹ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ